ವಾರದ ಪತ್ರ

## ಲಗಾಮಿಲ್ಲದ 'ಗೀತಾ'

ಕನ್ನಡ ಟೀವಿ ಧಾರಾವಾಹಿಗಳ ತಪ್ಪುಗಳನ್ನು ತೋರಿಸುವ 'ಜಾಣರ ಪೆಟ್ಟಿಗೆ' ಒಂದು ಉತ್ತಮ ವೇದಿಕೆ. ಆದರೆ ಧಾರಾವಾಹಿಗಳ ತಯಾರಕರು ಮಾತ್ರ ತಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತಿಲ್ಲ. ಬದಲಾಗಿ ನೀವೆಷ್ಟು ಬರಿಯುತ್ತಿರೋ ಬರಿಯಿರಿ ನಮಗೆ ಸರಿ ಕಂಡದ್ದನ್ನು ನಾವು ಮಾಡುತ್ತೇವೆ ಎನ್ನುವಂತೆ ಕಾಣುತ್ತಿದೆ. ನಾವು ಏನು ತೋರಿಸಿದರೂ ವೀಕ್ಷಕರು ಅದನ್ನು ಸ್ವೀಕರಿಸುತ್ತಾರೆ. ಎಂಬ ಮನೋಭಾವನೆ ಅವರಲ್ಲಿದೆ.

'ಗೀತಾ'ಕ್ಕಂತೂ ಲಂಗುಲಗಾಮೇ ಇಲ್ಲದಂತಾಗಿದೆ. ಮಧ್ಯಮ ವರ್ಗದ ವ್ಯಕ್ತಿಯೊಬ್ಬನಿಗೆ ಮಂತ್ರಿಯು ಹೆದರಿಕೊಳ್ಳುವುದು. ಶ್ರೀನಿವಾಸ ಕೋಲೊಂದನ್ನು ತೆಗೆದುಕೊಂಡು ಮಂತ್ರಿಯ ಮನೆಗೆ ನುಗ್ಗಿದರೂ, ಆ ಮನೆಯವರೆಲ್ಲ ಗರಬಡಿದವರಂತೆ ಸುಮ್ಮನಿರುವುದು. ನಾಲ್ಕು ಮಂದಿ ರೌಡಿಗಳ ವಿರುದ್ಧ ಗೀತಾ ಒಬ್ಬಳೇ ಹೋರಾಡಿ ಓಡಿಸುವುದು. ನಿದ್ದೆಗುಳಿಗೆ ಬೆರಸಿದ ಜೂಸ್ ಕುಡಿದ ವಿಜಯನಿಗೆ ಒಂದೆರಡು ಗಂಟೆಯಲ್ಲೇ ಎಚ್ಚರವಾಗುವುದು. ಇವೆಲ್ಲ ತೀರ ಅಸಂಬದ್ಧ, ಅತಾರ್ಕಿಕ ಅಂಶಗಳು. ಇದನ್ನು ತಡೆಯಲು 'ಜಾಣರ ಪೆಟ್ಟಿಗೆ' ಒಂದರಿಂದ ಸಾಧ್ಯವಿಲ್ಲ. ಸೆನ್ಸಾರ್‌ಶಿಪ್ ಅಳವಡಿಸುವುದು ಸೂಕ್ತ.

—ಮುರಲೀಧರ ಕುಲಕರ್ಣಿ, ಬೀದರ್

## ಹತ್ತರಲ್ಲಿ ಇನ್ನೊಂದು ಆಗದಿರಲಿ!

ಝೀ ಕನ್ನಡದ 'ಮಹಾನಾಯಕ' ಅಂಬೇಡ್ಕರ್ ಧಾರಾವಾಹಿಯ ವಿಷಯ ಮತ್ತು ತಾಂತ್ರಿಕ ಗುಣ ಮಟ್ಟದ ಬಗ್ಗೆ ಎರಡು ಮಾತಿಲ್ಲ. ಭೀಮನ ಪಾತ್ರ ಮಾಡುತ್ತಿರುವ ಬಾಲಕನದ್ದೂ ಸೇರಿ ಎಲ್ಲರ ಅಭಿನಯ ನಿಜಕ್ಕೂ ಅದ್ಭುತ. ಆದರೆ ಭೀಮನನ್ನೂ ಸೇರಿಸಿ ಅವರ ಕುಟುಂಬದ ಎಲ್ಲಾ ಸದಸ್ಯರ ಮೇಲೆ ಪ್ರತೀ ನಿತ್ಯ ಕೊಡುತ್ತಿರುವ ಹಿಂಸೆ, ತೊಂದರೆ, ಅಪಹಾಸ್ಯ ತೀರಾ ಅಸ್ವಾಭಾವಿಕ.

ಒಬ್ಬ ಕಪಟ ಸ್ವಾಮಿ ಮತ್ತು ಅವನ ನಾಲ್ಕಾರು ಚೇಲಾಗಳು ಕೊಡುತ್ತಿರುವ ಹಿಂಸೆ ತರ್ಕರಹಿತ. ಸವಾಲಿನ ಪರೀಕ್ಷೆಗಳು ನಿಜಕ್ಕೂ ಅತಿರೇಕದ ಪರಮಾವಧಿ. ಈ ಖಳರ ಗುಂಪಿಗೆ ಭೀಮನ ಮಲ ತಾಯಿಯ ಬೆಂಬಲ. ಇಂತಹ ಅಸಂಬದ್ಧ ದೃಶ್ಯಗಳಿಗೆ ಕಡಿವಾಣ ಹಾಕಿ ಭೀಮನ ಮುಂದಿನ ಸಾಧನೆಗಳ ಬಗ್ಗೆ ಗಮನ ಹರಿಸುವುದು ಒಳಿತು. ವೀಕ್ಷಕರಿಗೆ ಆರಂಭದ ದಿನಗಳಲ್ಲಿ ಇದ್ದ ಆಸಕ್ತಿ, ಕುತೂಹಲ ಕಡಿಮೆಯಾಗುತ್ತಿದೆ. ಇದೂ ಹತ್ತರಲ್ಲಿ ಇನ್ನೊಂದು ಅನ್ನೋ ಭಾವನೆಯನ್ನು ಹುಟ್ಟಿಸದೇ ಇರಲಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಮತ್ತೆ ಮತ್ತೆ ಅದೇ ರಾಗ



ಕಲರ್ಸ್ ಕನ್ನಡದ 'ಬಿಗ್ ಬಾಸ್ ಸೆಕೆಂಡ್ ಇನಿಂಗ್ಸ್' ಎಂದು ಮತ್ತೆ ಮೊದಲಿನ ತರಹ ಮತ್ತೆ ಎಲ್ಲರನ್ನೂ ಪರಿಚಯಿಸಿದ್ದು ಸರಿಕಾಣಲಿಲ್ಲ. ಎಲ್ಲರಿಗೂ ಎಲ್ಲ ಸ್ಪರ್ಧಿಗಳ ಪರಿಚಯವಿತ್ತು ಪುನಃ ಒಳಗೆ ಬಂದಾಗ ಒಬ್ಬರನ್ನು ಒಬ್ಬರು ತಬ್ಬಿ ಪರಿಚಯಿಸಿಕೊಳ್ಳುವುದು ಬೇಕಿರಲಿಲ್ಲ. ಅದಕ್ಕಾಗಿ ಒಂದು ದಿನದ ಧಾರಾವಾಹಿಗಳನ್ನು ನಿಲ್ಲಿಸಿದ್ದು ಸುತಾರಾಂ ಒಪ್ಪಲು ಸಾಧ್ಯವಿಲ್ಲ. ನಟ ಸುದೀಪ್ ಅವರನ್ನು ದೊಡ್ಡ ಮಟ್ಟದಲ್ಲಿ ಸಂಭ್ರಮಿಸಿದ್ದೂ ಕೃತಕ ಎಂದೆನಿಸಿತು. 'ಬಿಗ್ ಬಾಸ್' ನಿತ್ಯದ ಧಾರಾವಾಹಿಗಳನ್ನು ಬಿಟ್ಟು ನೋಡುವ ಕಾರ್ಯಕ್ರಮವೇನಲ್ಲ. ಅದಕ್ಕಾಗಿ ನಮ್ಮ ಒಂದು ದಿನ ಹಾಳು ಮಾಡಿದ್ದು ಖಂಡಿತ ಸರಿಯಲ್ಲ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಸುದ್ದಿ ಗುದ್ದಿ!

'ಪ್ರಶ್ನೆ: ರಾಮನು ರಾವಣನನ್ನು ಹೇಗೆ ಕೊಂದನು? ಮೂರು ಪುಟಗಳು ಮೀರದಂತೆ ಬರೆಯಿರಿ.

ಉತ್ತರ: ರಾಮನು ರಾವಣನನ್ನು ಗುದ್ದಿ ಗುದ್ದಿ ಗುದ್ದಿ... ಮೂರು ಪುಟ ಗುದ್ದಿ... ಗುದ್ದಿ ಕೊಂದನು' ಇದು ತುಂಬ ಹಳೆಯ ಜೋಕ್.

ನಮ್ಮ ಈಗಿನ ಸುದ್ದಿ ವಾಹಿನಿಗಳ ಕಥೆಯೂ ಹೀಗೆ ಆಗಿದೆ. ನಿರೂಪಕರು ತಮಗೆ ಬರೆದುಕೊಟ್ಟ ಮೂರು ಸಾಲುಗಳ ಸುದ್ದಿಯನ್ನು ಅರ್ಧ ಗಂಟೆಯವರೆಗೂ ಗುದ್ದಿ ಗುದ್ದಿ ಗುದ್ದಿ ಓದುತ್ತಿದ್ದಾರೆ.

—ಪಿ.ಜೆ. ರಾಘವೇಂದ್ರ, ಮೈಸೂರು

## ಮಾಧ್ಯಮ ಅವಾಂತರ

ಪ್ರಸ್ತುತ ಸುದ್ದಿ ಮಾಧ್ಯಮಗಳು ಸುದ್ದಿಯನ್ನೂ ಸಾಮಾನ್ಯವಾಗಿ ವೈಭವೀಕರಿಸಿ ತೋರಿಸುತ್ತಿವೆ. ಮತ್ತೆ ಕೊರೊನಾದ (ಡೆಲ್ಟಾ ಪ್ಲಸ್) ಬಗ್ಗೆ ಮಾಹಿತಿ ತಿಳಿಸುವ ರೀತಿ ವೀಕ್ಷಕರಿಗೆ ಭಯವನ್ನು ಉಂಟುಮಾಡುತ್ತಿದೆ. ಜಾಗೃತಿ ಮೂಡಿಸುವ ನೆಪದಲ್ಲಿ ಮತ್ತೆ ಮತ್ತೆ ಹೇಳಿ ಅಧೀರರನ್ನಾಗಿ ಮಾಡುತ್ತಿದೆ.

ಸತ್ಯ ಮತ್ತು ಘಟಿಸಿದ ಸಂಗತಿಗಳಿಗೆ ಪ್ರಾಧಾನ್ಯತೆ ನೀಡಬೇಕು. ಯಾರಿಗಾದರೂ ತೊಂದರೆಯಾಗಿದ್ದರೆ ಅದಕ್ಕೆ ಪರಿಹಾರ ಸೂಚಿಸುವಂತೆ ನಿರೂಪಿಸಬೇಕು. ಆಗ ಮಾಧ್ಯಮವೂ ಸಂವಿಧಾನದ ಒಂದು ಅಂಗವಾಗಿ ಉಳಿಯುತ್ತದೆ. ಯಾವುದೇ ಸುದ್ದಿ ಮಾಧ್ಯಮ ಸುದ್ದಿಯನ್ನು ಪ್ರಕಟಿಸಿದರೆ ಅದು ನೂರಕ್ಕೆ ನೂರರಷ್ಟು ಸತ್ಯವಾಗಿರಬೇಕು. ಕೇವಲ ವದಂತಿಗಳ ಅವಾಂತರ ಆಗಬಾರದು.

—ವಿ. ಹೇಮಂತ ಕುಮಾರ್, ಬೆಂಗಳೂರು

## ಪರ ಭಾಷಾ ಸಿನಿಮಾ ಪ್ರಚಾರ ಸಲ್ಲ

ಕನ್ನಡದ ಬಹುತೇಕ ವಾಹಿನಿಗಳು ತೆಲುಗು, ತಮಿಳು, ಮಲೆಯಾಳಂ ಮತ್ತು ಹಿಂದಿ ಚಲನಚಿತ್ರಗಳನ್ನು ಯದ್ವಾತದ್ವಾ ಪ್ರಚಾರ ಮಾಡುತ್ತಿರುವುದು ನಮಗೆ ನೋವುಂಟು ಮಾಡಿದೆ. ಪರಭಾಷೆ ಪ್ರೀತಿ ನಮ್ಮ ಕನ್ನಡ ವಾಹಿನಿಗಳಲ್ಲಿ ಮಾತ್ರ ಕಂಡು ಬಂದಿರುವುದು ದುರಾದೃಷ್ಟಕರ.

ತೆಲುಗು ಸಿನಿಮಾದಲ್ಲಿ ಬಳ್ಳಾರಿ ಜಿಲ್ಲೆಯನ್ನು ತೆಲಂಗಾಣವೆಂದೂ ಮಂಗಳೂರನ್ನು ಮಲಯಾಳಂ ಸಿನಿಮಾಗಳಲ್ಲಿ ವಂಗಳಾವರಂ ಕೇರಳದ ಭಾಗ ಎಂದು ತೋರಿಸಿದ್ದೂ ಇದೆ. ಇನ್ನೂ ತಮಿಳು ಸಿನಿಮಾಗಳಲ್ಲಿ ಚಾಮರಾಜನಗರ ಜಿಲ್ಲೆಯ ಬಹುಭಾಗವನ್ನು ತಮಿಳುನಾಡು ಎಂದು ಬಿಂಬಿಸಿರುವುದೂ ನೋವಿನ ಸಂಗತಿ.

ಆದರೆ ಕನ್ನಡ ಮನೋರಂಜನೆ ಮತ್ತು ಸುದ್ದಿ ವಾಹಿನಿಗಳು ಮಾತ್ರ ಪರಭಾಷಾ ಸಿನಿಮಾಗಳನ್ನು ಪ್ರಮೋಟ್ ಮಾಡುತ್ತಿವೆ. ಕನ್ನಡ ಚಲನಚಿತ್ರಗಳೇ ಪ್ರತಿ ವರ್ಷ ನೂರಾರು ತೆರೆ ಕಾಣುತ್ತಿರುವಾಗ ಅನ್ಯ ಭಾಷೆಯ ಸಿನಿಮಾಗಳ ಪ್ರಚಾರ ದುರದೃಷ್ಟಕರ. ಕನ್ನಡ ಸಿನಿಮಾಗಳ ಪ್ರಚಾರದಿಂದ ಕನ್ನಡದ ನಟ– ನಟಿಯರು, ಕಲಾವಿದರಿಗೆ ಮಾತ್ರ ಅಲ್ಲದೆ, ತಂತ್ರಜ್ಞರಿಗೆ, ಕಾರ್ಮಿಕ ವರ್ಗದವರಿಗೆ ಜೀವನೋಪಾಯಕ್ಕೆ ಸಹಕಾರ ಮಾಡಿದಂತೆ ಆಗುತ್ತದೆ ಎನ್ನುವುದು ನನ್ನ ನಂಬಿಕೆ.

—ವಿಜಯಕುಮಾರ್ ಎಚ್.ಕೆ., ರಾಯಚೂರು

## ಉಪಕಥೆ ಬೇಕಿತ್ತೇ...

ಕಲರ್ಸ್ ಕನ್ನಡದ 'ಕನ್ನಡತಿ' ಹಾದಿ ತಪ್ಪಿ ಎತ್ತೆತ್ತಲೋ ಓಡುತ್ತಿದೆ. ಕಥೆ ಎಳೆಯುವುದೆ ಧಾರಾವಾಹಿಯ ಉದ್ದೇಶವೇ? ಅರ್ಥ ಸಂಬಂಧವಿಲ್ಲದ ಉಪಕಥೆ ಸೃಷ್ಟಿ ಮಾಡಿದ್ದಾದರೂ ಏಕೆ ಎಂದು ಗೊತ್ತಾಗ್ತಾಯಿಲ್ಲ. ಹರ್ಷನ ನಡತೆ ವಿಚಿತ್ರವಾಗಿ ಬಿಂಬಿಸಿದ್ದಾರೆ, ಅವನು ಅವನ ತಾಯಿಯನ್ನು ಎಷ್ಟು ಪ್ರೀತಿಯಿಂದ ನಡೆಸಿಕೊಂಡಿದ್ದಾನೆ ಮೂಲ ಕಥೆಯಲ್ಲಿ, ಇನ್ನು ಭುವಿ ಪ್ರಪಂಚದಲ್ಲಿ ತಾನೊಬ್ಬಳೇ ಎಲ್ಲರ ಬಗ್ಗೆ ಆದರ ತೋರಿಸುವುದಾ? ಆಂಟಿ, ಅಂಕಲ್ ಕೇಳಿ ಕೇಳಿ ತಲೆ ಕೆಡ್ತು, ಮಕ್ಕಳ ಹಾಗೆ ಮೊಬೈಲ್ ಕ್ಯಾಚ್ ಮಾಡುವುದು... ಈ ಎಲ್ಲವೂ ಪೆದ್ದತನದ ಪರಮಾವಧಿ..

—ಉಷಾ ಮೂರ್ತಿ, ಬೆಂಗಳೂರು